## ಕಸೂತಿ ಕೈಚೀಲಗಳು ಈಗೆಲ್ಲಿ?

ಕೆಲವು ವರ್ಷಗಳ ಹಿಂದೆ ಗ್ರಾಮೀಣ ಪ್ರದೇಶದಲ್ಲಿ ಮೇಟಿ ಬಟ್ಟೆಯಿಂದ ತಯಾರಿಸಿದ ಕೈಚೀಲಗಳನ್ನು ಉಪಯೋಗಿಸುತ್ತಿದ್ದರು. ಮೇಟಿ ಬಟ್ಟೆಯ ಮೇಲೆ ಸೂಜಿ ದಾರದಿಂದ ಮಾಡಿದ ಕಸೂತಿಯ ಕೈಚೀಲಗಳು ಎಲ್ಲರನ್ನೂ ಆಕರ್ಷಿಸುತ್ತಿದ್ದವು. ಬಿಳಿಯ ಬಟ್ಟೆಯ ಮೇಲೆ ಅಥವಾ ಬಣ್ಣದ ಹಸಿರು, ನೀಲಿ, ಕೆಂಪು, ಕಪ್ಪು ವರ್ಣದ ದಾರಗಳಿಂದ ಚಿತ್ರಗಳನ್ನು ಬಟ್ಟೆಯ ಮೇಲೆ ಬಿಡಿಸುತ್ತಿದ್ದರು. ಹೀಗೆ ಕಸೂತಿ ಹಾಕಿದ ಕೈಚೀಲಗಳು ಅಂದವಾಗಿ ಕಾಣುತ್ತಿದ್ದವು. ಈಗ ಪ್ಲಾಸ್ಟಿಕ್ ಚೀಲಗಳ ಭರಾಟೆಯಲ್ಲಿ ಇಂತಹ ಕಸೂತಿಯ ಕೈಚೀಲಗಳು ಕಣ್ಮರೆಯಾಗಿವೆ.

**-ಜಗದೀಶ ಎಂ. ಸಂಗಣ್ಣನವರ, ಬೈಲಹೊಂಗಲ**





## ಅರಿಷಿಣದ ಹೂವು

ನೆಲದಲ್ಲೆ ಅರಳಿದ ಕಮಲದಂತೆ ಕಾಣುವ ಇದು ಅಪರೂಪದ ಅರಿಷಿಣದ ಹೂವು. ಸಾಮಾನ್ಯವಾಗಿ ಅರಿಷಿಣ ಹೂವು ಬಿಡುವುದಿಲ್ಲ. ಇದು ಬೇರೆಯದೇನೋ ಇರಬೇಕೆಂದು ಪರಿಚಯದವರೊಬ್ಬರು ಕಿತ್ತೆಸೆಯಲು ಯೋಚಿಸಿದ್ದರು. 'ಸುಧಾ' ಪತ್ರಿಕೆಯಲ್ಲಿ 'ಕಸ್ತೂರಿ ಅರಿಷಿಣ' ದ ಬಗ್ಗೆ ಬಂದ ಮಾಹಿತಿಯನ್ನು ತೋರಿಸಿದೆ. ಖುಷಿಯಾದ ಅವರು ಈಗ ಇದನ್ನು ದಿನನಿತ್ಯ ಬಳಸುತ್ತಿದ್ದಾರೆ.

**-ಸುಮಾ ಕಳಸಾಪುರ, ಶಿವಮೊಗ್ಗ**

## 'ಅಮೃತ' ಬೇರು!

ಹೀಗೆ ಸಿಂಬೆ ಸುತ್ತಿದಂತೆ ಕಾಣುವುದು ಅಮೃತಬಳ್ಳಿಯ ಬೇರು. ಸುಮಾರು 20 ಅಡಿಗಿಂತ ಹೆಚ್ಚು ಉದ್ದದ ಬೇರನ್ನು ಹೀಗೆ ಸಿಂಬೆ ಮಾಡಲಾಗಿದೆ! ಸಕ್ಕರೆ ಕಾಯಿಲೆಗೆ ಬಳಸುವ ಅಮೃತಬಳ್ಳಿಯ ಕಾಂಡ, ಎಲೆಗಳನ್ನು ನೋಡಿದವರು ಅದರ ಬೇರುಗಳನ್ನು ನೋಡುವುದು ಕಡಿಮೆ. ಬೇಲಿ ಹತ್ತಿರ ಮರ – ಗಿಡಗಳ ಮೇಲೆ ಏರಿ ಬೆಳೆಯುವ ಈ ಔಷಧಿ ಬಳ್ಳಿ, ಮರ ಎಷ್ಟೇ ಎತ್ತರ ಬೆಳೆದಿರಲಿ ಅದನ್ನು ಏರದೆ ಬಿಡದು. ಆಗ ಅಲ್ಲಿಂದ ಈ ರೀತಿಯ ತಂತಿಯಂತಹ ಬೇರುಗಳನ್ನು ಕಾಂಡದ ಗಿಣ್ಣುಗಳಿಂದ ಭೂಮಿಯ ತನಕ ಬಿಳಿಲುಗಳಾಗಿ ಬಿಟ್ಟು ಭೂ ಸಂಪರ್ಕ ಪಡೆಯುತ್ತದೆ. ಮರಗಳ ಎತ್ತರಕ್ಕನುಗುಣವಾಗಿ ಬಿಡುವ ಈ ಬೇರುಗಳು ಒಂದೇ ರೀತಿಯ ರಚನೆ, ವ್ಯಾಸ ಹೊಂದಿರುತ್ತವೆ. ಕ್ಯಾನ್ಸರ್ ಕಾಯಿಲೆಗೆ ಇವುಗಳ ರಸ ಉತ್ತಮ ಔಷಧಿ ಎಂದು ಪರಿಗಣಿಸಲಾಗಿದೆ.

**-ಎಸ್. ಓಂಕಾರಯ್ಯ ತವನಿಧಿ, ದಾವಣಗೆರೆ**

